# ಇವ್ರು ಮಲೆನಾಡಲ್ಲ, ಪೆರಿಯಾರ್ ಗಿಡ್ಡ!

ಇದೇನಪ್ಪ ಸೆಲೆಬ್ರಿಟಿ ಕಾಲಂನಲ್ಲಿ ಹಸು ನುಗ್ಗಿ ಬಂದಿದೆ ಎಂದು ಹುಬ್ಬೇರಿಸಬೇಡಿ. ಸೆಲೆಬ್ರಿಟಿ ಆಗಲೆಂದೇ ಹೊರಟ ಹಸುವಿನ ತಳಿಯ ಕಥೆ ಇದು. ವಿನಾಶದ ಅಂಚಿನಲ್ಲಿರುವ ಹಸು ತಳಿಯೊಂದರ ಪುನರುತ್ಥಾನದ ಕಥೆಯೂ ಹೌದು. ಪೆರಿಯಾರ್ ನದಿ ತೀರದಲ್ಲಿ ಮಾತ್ರ ಕಂಡು ಬರುತ್ತಿದ್ದ ಈ ವಿಶೇಷ ತಳಿಯ ಹೆಸರು 'ಪೆರಿಯಾರ್ ಕುಳ್ಳನ್'. ನೋಡೋದಕ್ಕೆ ನಮ್ಮ ಮಲೆನಾಡು ಗಿಡ್ಡದ ತದ್ರೂಪದಂತಿದೆ. ಹೆಸರಿನಲ್ಲೇ 'ಕುಳ್ಳನ್ (ಗಿಡ್ಡ)' ಎಂದಿರುವುದರಿಂದ ಅದರ ಮುಖ್ಯ ಗುಣವಿಶೇಷಣವನ್ನು ವಿವರಿಸಿ ಹೇಳಬೇಕಿಲ್ಲ. 'ಇನ್ನೇನು ಕಾಣೆಯಾಗಿ ಬಿಡಲಿದೆ' ಎಂದು ಈ ತಳಿಯ ಹಸುಗಳ ಪ್ರಿಯರು ಮರಗುತ್ತಿರುವಾಗಲೇ ಇದ್ದಕ್ಕಿದ್ದಂತೆ ಅದರ ಸಂರಕ್ಷಣೆಯ ಹಾದಿಯೂ ತೆರೆದುಕೊಂಡಿದೆ.

ದೇಶದ ಪ್ರಮುಖ ಕೃಷಿ ಕಾರ್ಯಾಗಾರಗಳಲ್ಲಿ ಪ್ರತ್ಯಕ್ಷವಾಗುತ್ತಿರುವ 'ಪೆರಿಯಾರ್ ಕುಳ್ಳನ್' ಸೆಲೆಬ್ರಿಟಿಯಂತೆ ಗತ್ತಿನಿಂದ ಹೆಜ್ಜೆ ಹಾಕುತ್ತದೆ. ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಸಹ ಈ ಹಸುವಿನ ಮೇಲೆ ವಿಶೇಷ ಆಸಕ್ತಿ ವಹಿಸಿದ್ದು, ಅದರ ಅನನ್ಯತೆಯನ್ನು ಗುರುತಿಸುವ ಕಾರ್ಯಕ್ಕೆ ಮುಂದಾಗಿದೆ.

ಈ ದೇಶಿ ತಳಿಯ ಹಸುವಿನ ಸ್ವಾದಿಷ್ಟ ಹಾಗೂ ಪೌಷ್ಟಿಕಾಂಶವುಳ್ಳ ಹಾಲು ಔಷಧೀಯ ಗುಣವನ್ನೂ ಹೊಂದಿದೆ ಎನ್ನುವುದು ಸಂಶೋಧನೆಗಳಿಂದ ನಿರೂಪಿತವಾಗಿದೆ. ಕೇರಳ ಸರ್ಕಾರದ ಪಶುಸಂಗೋಪನೆ ಮಂಡಳಿಯು 'ಪೆರಿಯಾರ್ ಕುಳ್ಳನ್' ತಳಿಯ ಎರಡು ಬಲಿಷ್ಠ ಹೋರಿಗಳನ್ನು ದತ್ತುಪಡೆದು, ಅವುಗಳಿಂದ ವೀರ್ಯ ಸಂಗ್ರಹ ಮಾಡುತ್ತಿದೆ. ಈ ತಳಿಯ ವಂಶವಾಹಿನಿ ಅಧ್ಯಯನವನ್ನೂ ನಡೆಸಿದೆ.

ಪಶುಸಂಗೋಪನೆ ಮಂಡಳಿಗೆ ಈ ಹೋರಿಗಳನ್ನು ಒದಗಿಸಿದವರು ಕೋಸ್ ಕುರಿಯನ್. ಅವರು ಎರ್ನಾಕುಲಂ ಜಿಲ್ಲೆಯ ಕೊಡನಾಡ ಗ್ರಾಮದ ಕುರಿಯನ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರೂ ಹೌದು. 'ಪೆರಿಯಾರ್ ಕುಳ್ಳನ್' ತಳಿಯ ಸಂರಕ್ಷಣೆ ಅವರ ನೆಚ್ಚಿನ ಹವ್ಯಾಸ. ಶಾಲಾಮಕ್ಕಳು ಪ್ರೊಜೆಕ್ಟ್ ರೂಪದಲ್ಲಿ ಈ ತಳಿಯ ಹಸುಗಳ ಕುರಿತು ಅಧ್ಯಯನ ನಡೆಸಿ ವರದಿ ನೀಡಿದ್ದೇ ಅವರಿಗೆ 'ಕುಳ್ಳನ್' ಮೇಲೆ ಪ್ರೀತಿ ಹುಟ್ಟಲು ಕಾರಣವಾಯಿತು. ನಾಲ್ಕು ವರ್ಷಗಳ ಹಿಂದೆಯೇ ಈ ಸಾಹಸಕ್ಕೆ ಕೈಹಾಕಿದ ಕುರಿಯನ್, ಈಗ ಶುದ್ಧ ತಳಿಯ ನೂರಾರು ಹಸುಗಳ ಒಡೆಯ. ಅವರ ಫಾರ್ಮ್‌ನ ಹೋರಿಗಳಿಂದ ಪಶುಸಂಗೋಪನೆ ಮಂಡಳಿ ಈಗಾಗಲೇ ಐದು ಸಾವಿರ ಡೋಸ್‌ಗಳಷ್ಟು ವೀರ್ಯ ಸಂಗ್ರಹಿಸಿ ಒಯ್ದಿದೆ.

'ನಾಲ್ಕು ವರ್ಷಗಳ ಹಿಂದೆ ಪೆರಿಯಾರ್ ಕುಳ್ಳನ್' ತಳಿಯನ್ನು ಸಂರಕ್ಷಿಸಬೇಕು ಎಂದು ನಿರ್ಧರಿಸಿದ ಮೇಲೆ ಸುತ್ತಲಿನ ಹಳ್ಳಿಗಳ ರೈತರ ಗುಂಪೊಂದನ್ನು ರಚಿಸಿದೆವು. ಹಸುಗಳ ತಳಿ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದ ಡಾ. ಜಯದೇವನ್ ನಂಬೂದರಿ ಅವರನ್ನು ಕರೆಯಿಸಿ, ಪಾಠ ಮಾಡಿಸಿದೆವು. ಈ ತಳಿಯ ಹಸುವನ್ನು ಹೇಗೆ ವರ್ಗೀಕರಿಸಬೇಕು ಎಂಬುದನ್ನು ಅವರು ನಮಗೆ ಹೇಳಿಕೊಟ್ಟರು' ಎಂದು ಕುರಿಯನ್ ನೆನಪಿಸಿಕೊಳ್ಳುತ್ತಾರೆ.

ರಾಷ್ಟ್ರೀಯ ಪ್ರಾಣಿ ವಂಶವಾಹಿನಿ ಸಂಪನ್ಮೂಲ ಕೇಂದ್ರ ಈಗ ಈ ತಳಿಯ ಶಾಸ್ತ್ರೀಯ ಅಧ್ಯಯನದಲ್ಲಿ ತೊಡಗಿದೆ. ಗುಣಲಕ್ಷಣಗಳನ್ನು ನಿಖರವಾಗಿ ಗುರುತಿಸಿ, ವರ್ಗೀಕರಿಸಲಿದೆ. ಈಗಾಗಲೇ ಕ್ಷೇತ್ರ ಅಧ್ಯಯನ ನಡೆಸಿರುವ ವಿಜ್ಞಾನಿಗಳ ತಂಡ, ಹಸುಗಳ ರಕ್ತದ ಮಾದರಿಯನ್ನು ಸಂಗ್ರಹಿಸಿದೆ. ತಳಿ ನಕ್ಷೆಯನ್ನು ಸಿದ್ಧಪಡಿಸುವ ಕಾರ್ಯದಲ್ಲಿ ನಿರತವಾಗಿದೆ.



ಪೆರಿಯಾರ್ ಕುಳ್ಳನ್ ಹಸುಗಳೊಂದಿಗೆ ಕೋಸ್ ಕುರಿಯನ್

ಕುಳ್ಳಗಿನ ಆಕಾರದ ಈ ತಳಿಯ ಹಸುಗಳು 95 ಸೆಂಟಿಮೀಟರ್‌ನಿಂದ ನೂರು ಸೆಂಟಿಮೀಟರ್‌ನಷ್ಟು ಎತ್ತರ ಇರುತ್ತವೆ. ಸಪೂರವಾದ ದೇಹವನ್ನು ಹೊಂದಿರುತ್ತವೆ. ಎಂತಹ ಹವಾಮಾನ ಬದಲಾವಣೆಯ ಸವಾಲುಗಳನ್ನೂ ಅವುಗಳು ಮೆಟ್ಟಿ ನಿಲ್ಲಬಲ್ಲವು. ಹಾಗೆಯೇ ಅತ್ಯಧಿಕ ಪ್ರಮಾಣದ ರೋಗ ಪ್ರತಿರೋಧಕ ಶಕ್ತಿಯನ್ನೂ ಅವುಗಳು ಹೊಂದಿವೆ ಎಂದು ನಂಬೂದರಿ ವಿವರಿಸುತ್ತಾರೆ.

'ಪೆರಿಯಾರ್ ಕುಳ್ಳನ್' ಸಂರಕ್ಷಣೆಯಲ್ಲಿ ಒಟ್ಟಾರೆ 40 ರೈತರು ತೊಡಗಿಕೊಂಡಿದ್ದಾರೆ. ಅವರ ಹೊಲಗಳನ್ನು ಕೃಷಿ ಶಾಲೆಗಳಾಗಿ, ಬಯಲು ಮ್ಯೂಸಿಯಂಗಳಾಗಿ ಪರಿವರ್ತಿಸುವ ಉದ್ದೇಶವನ್ನೂ ಪಶುಸಂಗೋಪನೆ ಮಂಡಳಿ ಹೊಂದಿದೆ. ದೇಶದ ನಾನಾ ಭಾಗಗಳಿಂದ ಬರುವ ರೈತರಿಗೆ ಈ ಕೃಷಿ ಶಾಲೆಗಳಲ್ಲಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ.

ಒಂದೊಮ್ಮೆ ತುಂಬಾ ಕಡಿಮೆ ಸಂಖ್ಯೆಗೆ ಕುಸಿದಿದ್ದ ಈ ತಳಿಯ ಹಸುಗಳು ಈಗ 2,500ರಷ್ಟಿವೆ. ಈ ಹಸುಗಳ ಹಾಲಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ. ಘಮಘಮಿಸುವ ತುಪ್ಪಕ್ಕಾಗಿ ವಾರಗಟ್ಟಲೆ ಕಾಯುತ್ತಾ ಕೂರುವವರಿಗೂ ಲೆಕ್ಕವಿಲ್ಲ. ಕುಳ್ಳನ್ ಗಂಜಲಕ್ಕೂ ಭಾರಿ ಬೇಡಿಕೆ ಇದೆ. ಕಾಡಿನಲ್ಲಿ ನಿಸರ್ಗದತ್ತವಾಗಿ ಬೆಳೆಯುವ ಹುಲ್ಲನ್ನು ಮೇಯ್ದು ಬರುವುದರಿಂದಲೇ ಈ ಹಸು ಅಷ್ಟೊಂದು ಸದೃಢವಾಗಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಈ ಹಸುವಿನ ಉತ್ಪನ್ನಗಳ ಮಾರಾಟಕ್ಕಾಗಿ ವ್ಯವಸ್ಥಿತ ಮಾರುಕಟ್ಟೆ ಜಾಲ ಕೂಡ ವೃದ್ಧಿಯಾಗಿದೆ. ಪೆರಿಯಾರ್ ಕುಳ್ಳನ್‌ನ ಪ್ರಖ್ಯಾತಿಯನ್ನು ಕಂಡು, ಅಷ್ಟೇ ಗುಣಮಟ್ಟದ ನಮ್ಮ ಮಲೆನಾಡು ಗಿಡ್ಡ, ಅಮೃತ್ ಮಹಲ್, ಹಳ್ಳಿಕಾರು ತಳಿಗಳ ಹಸುಗಳು, 'ನಮ್ಮ ಸಂರಕ್ಷಣೆಗೂ ಇಂತಹ ಭಾಗ್ಯ ಸಿಗುವುದು ಯಾವಾಗ' ಎಂದು ಮರುಗಿದರೆ ಆಶ್ಚರ್ಯವಿಲ್ಲ.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65